**<u>ದಿನಾಂಕಃ 12.11.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.</u>**

**<u>ಮುಂದುವರೆದ ಪಾಟೀಸವಾಲುಃ ಪ್ರತಿವಾದಿ ಪರ ವಕೀಲರಿಂದಃ</u>**

ನಾನು 3ನೇ ತರಗತಿಯವರೆಗೆ ವ್ಯಾಸಂಗ ಮಾಡಿರುತ್ತೇನೆ. ನನಗೆ ಕನ್ನಡ ಓದಲು ಬರೆಯಲು ಬರುತ್ತದೆ. ನಾನು ಸಹಿ ಮಾಡುವುದಕ್ಕೂ ಮುಂಚೆ ಅದರಲ್ಲಿ ಏನಿದೆ ಎಂದು ಓದಿ ತಿಳಿದುಕೊಂಡು ಸಹಿ ಮಾಡುತ್ತೇನೆ ಎಂದರೆ ನನಗೆ ಖಾಲಿ ಪೇಪರ್ ನಲ್ಲಿ ಸಹಿ ಹಾಕಲು ಹೇಳಿದರೆ ಹಾಕುತ್ತೇನೆ. ದಾವಾ ಪತ್ರದಲ್ಲಿ ಏನು ಬರೆದಿದೆ ಎಂದು ನಾನು ಓದಿಲ್ಲ. 2ನೇ ಪ್ರತಿವಾದಿಯನ್ನು ಮನೆಲೇ ಇರಿಸಿಕೊಳ್ಳಲಾಗಿರುತ್ತದೆ. ರಾಧಮ್ಮ ಅವರ ಪತಿ ರಾಧಮ್ಮನ ತಾಯಿ ಹುಚ್ಚಮ್ಮರವರ ಜೊತೆ ವಾಸವಿದ್ದರು. ನನ್ನ ಗಂಡರವರು ಸರ್ಕಾರಿ ಸೇವೆಯಲ್ಲಿದು ನಾರ್ವೆ ಹಾಸನ ಮೊಸಳೆ ಹೊಸಳ್ಳಿಯಲ್ಲಿ ಕೆಲಸ ಮಾಡಿರುತ್ತಾರೆ. ಮದುವೆಯಾದ ನಂತರ 30 ವರ್ಷಗಳ ಕಾಲ ಹೊರಗಡೆ ಇದ್ದೆವು. ಈಗ ಕಬ್ಬಳಿಯಲ್ಲಿ 20 ವರ್ಷದಿಂದ ವಾಸವಾಗಿದ್ದೇನೆ. ನನ್ನ ಪತಿಯ ತಂದೆ ಮನೆ ಅರಕಲಗೂಡು. ನನ್ನ ಪತಿಯವರಿಗೂ ನನಗೂ ವೈಮನಸ್ಸು ಇದ್ದ ಕಾರಣ ನಾನು ಕಬ್ಬಳ್ಳಿ ಗ್ರಾಮದಲ್ಲಿ ವಾಸವಾಗಿರುತ್ತೇನೆ. ಜೀವನಕ್ಕಾಗಿ ನನ್ನ ಮಗ ಹಣವನ್ನು ಕೊಡುತ್ತಾನೆ. ನಮ್ಮ ತಂದೆಯ ಹೆಸರಿನಲ್ಲಿ ಎರಡು ಸರ್ವೆ ನಂಬರ್ ಇರುತ್ತದೆ ಒಟ್ಟು ಎಷ್ಟು ವಿಸ್ತೀರ್ಣ ಎಂದು ಹೇಳಲು ಸಾಧ್ಯವಿಲ್ಲ. ನನ್ನ ತಂದೆಯವರು ಯಾವಾಗ ತೀರಿ ಹೋದರು ಎಂದು ಗೊತ್ತಿಲ್ಲ. ರಾಧಮ್ಮರವರ ಮದುವೆಯನ್ನು ನನ್ನ ತಾಯಿ ಇದ್ದಾಗಲೇ ಮಾಡಲಾಗಿರುತ್ತದೆ. 2020 ಕ್ಕಿಂತ ಹಿಂದೆ ಪಹಣಿ ಯಾರ ಹೆಸರಿನಲ್ಲಿತ್ತು ಎಂದು ನನಗೆ ಗೊತ್ತಿಲ್ಲ. ಅದರ ಹಿಂದೆ ಯಾರ ಹೆಸರಿನಲ್ಲಿತ್ತು ಎಂದು ದಾಖಲಾತಿ ತೆಗೆಸಿ ನೊಡಿಲ್ಲ. ಸರ್ವೆ ನಂಬರ್ ಎಷ್ಟು ಪೋಡಾಗಿದೆ ಯಾರ ಹೆಸರಿನಲ್ಲದೆ ಎಂದು ನಾನು ನೋಡಿಲ್ಲ. ರಾಧಮ್ಮರವರ ಹೆಸರಿಗೆ ಹೇಗೆ ಪಹಣಿ ಬಂದಿರುತ್ತದೆ ಎಂದು ನಾನು ನೋಡಿಲ್ಲ. ಖಾಲಿ ಪೇಪರ್ ಗೆ ಸಹಿಯನ್ನು ಮಾಡಿರುತ್ತೇನೆ ಎಂದು ಹೇಳಿದು ಆ ಪೇಪರ್ ನಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ. ಈ ಕೇಸನ್ನು

ಹಾಕಿರುವುದು ಯಾವ ಸರ್ವೆ ನಂಬರ್ ಹಾಗೂ ಯಾರ ಹೆಸರಿಗೆ ಪಹಣಿ ಬರಬೇಕು ಎಂದು ಹಾಕಲಾಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ನನ್ನ ತಾಯಿ ಹುಚ್ಚಮ್ಮ ಮೃತ ಪಟ್ಟ ನಂತರ ಅವರ ಕಾರ್ಯಗಳನ್ನು ರಾಧ ಮತ್ತು ಅವರ ಪತಿ ಮಾಡಿರುತ್ತಾರೆ ಎಂದರೆ ಎಲ್ಲಾರು ಒಟ್ಟಿಗೆ ಮಾಡಿರುತ್ತೇವೆ ಎಂದು ಹೇಳುತ್ತಾರೆ, ನನ್ನ ತಾಯಿ 2002 ರಲ್ಲಿ ಮೃತ ಪಟ್ಟಿರುತ್ತಾರೆ. ನನ್ನ ತಾಯಿ ಮೃತ ಪಟ್ಟ ನಂತರ ಕುಟುಂಬದ ಆಸ್ತಿಯ ಪಹಣಿ ಪತ್ರಿಕೆಗಳನ್ನು ಖಾತೆ ಬದಲಾವಣೆಗೆ ಹಾಕಿರುವುದಿಲ್ಲ. 2 ನೇ ಪ್ರತಿವಾದಿ ರಾಧಮ್ಮ ರವರು ಏನು ತಕರಾರು ಹಾಕಿರುತ್ತಾರೆ ಎಂದು ನಾನು ತಿಳಿದುಕೊಂಡಿಲ್ಲ.

(ವಕೀಲರ ಕೋರಿಕೆ ಮೇರೆಗೆ  ಪಾಟೀಸವಾಲಿಗೆ ಸಮಯ ನೀಡಿದೆ)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದಂತೆ ಗಣಕೀಕರಣಗೊಳಿಸಿ ಮುದ್ರಿಸಲಾಯಿತು.)

ಓ ಹೇ ಕೇ ಸರಿ ಇದೆ

ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ
ನ್ಯಾಯಾಧೀಶರು, ಚನ್ನರಾಯಪಟ್ಟಣ